# ಜೆಎಸ್ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 06-07-2018

**ಪ್ರಕಟಣೆಯ ಕೃಪೆಗಾಗಿ**

**2018-19ನೇ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿ ಪ್ರಾರಂಭ**

ಕೊಳ್ಳೇಗಾಲ : 06-07-18 : 2018-19ನೇ ಸಾಲಿಗೆ ಇಲ್ಲಿನ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಗೆ (ಎಂ.ಕಾಂ) ಪ್ರವೇಶಾತಿಯು ಪ್ರಾರಂಭಗೊಂಡಿದ್ದು, ಅರ್ಹ ಬಿ.ಕಾಂ ಮತ್ತು ಬಿ.ಬಿ.ಎ ಪದವೀದರರು ಪ್ರವೇಶಾತಿ ಪಡೆಯಬಹುದಾಗಿದೆಯೆಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ, ಯುಜಿಸಿಯಿಂದ ಅಂಗೀಕೃತ ಮತ್ತು ನ್ಯಾಕ್‌ನಿಂದ "ಬಿ" ಶ್ರೇಣಿ ಹೊಂದಿರುವ ಕಾಲೇಜಿನ ಸ್ನಾತಕೋತ್ತರ ವಿಭಾಗವು 2001ರಲ್ಲಿಯೇ ಸ್ಥಾಪಿತಗೊಂಡಿದ್ದು, ನುರಿತ ಅಧ್ಯಾಪಕ ತಂಡ, ಸುಸಜ್ಜಿತ ಹಾಗೂ ಅತ್ಯಾಧುನಿಕ ಸೌಲಭ್ಯವುಳ್ಳ ತರಗತಿ ಕೊಠಡಿಗಳು, ಸಭಾಂಗಣ, ಗಣಕಯಂತ್ರ ಪ್ರಯೋಗಾಲಯ, ಗ್ರಂಥಾಲಯ, ಮಹಿಳಾ ವಸತಿನಿಲಯ, ದುಬಾರಿಯಲ್ಲದ ಶುಲ್ಕ, ಅತ್ಯಾಧುನಿಕ ಜಿಮ್ ವ್ಯವಸ್ಥೆ ಹೊಂದಿದ್ದು, ಉನ್ನತ ವಿದ್ಯಾಭ್ಯಾಸ ಬಯಸಿ ಬರುವ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಉತ್ತಮ ವಾತಾವರಣ ಹೊಂದಿರುವುದು ಕಾಲೇಜಿನ ವಿಶೇಷತೆಯಾಗಿದೆ.

ಇಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ವಿವಿಧ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ ವಿಫುಲವಾಗಿರುವುದನ್ನು ಕಾಲೇಜಿನ ಆಡಳಿತ ಮಂಡಳಿ ಸ್ಮರಿಸುತ್ತದೆ. ಅರ್ಹ ವಿದ್ಯಾರ್ಥಿನಿಯರು ಪ್ರವೇಶಾತಿ ಪಡೆದು ಕಾಲೇಜಿನ ಸೌಲಭ್ಯಗಳ ಸದುಪಯೋಗ ಪಡಿಸಿಕೊಳ್ಳುವಂತೆ ಪ್ರಾಚಾರ್ಯರು ಪ್ರತಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ. **ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯ ಪ್ರೊ. ಉಮೇಶ (9480244096) ರವರನ್ನು ಸಂಪರ್ಕಿಸಬಹುದಾಗಿದೆ.**